A-PDF WORD TO PDF DEMO: Purchase from www.A-PDF.com to remove the watermark

**ಕರ್ನಾಟಕ ಅರಣ್ಯ ಇಲಾಖೆ**
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಧಾರವಾಡ ವಿಭಾಗ, ಧಾರವಾಡ,
"ಅರಣ್ಯ ಸಂಕೀರ್ಣ ಕೆ.ಸಿ.ಪಾರ್ಕ ಎದುರಿಗೆ, ಪಿ.ಬಿ.ರಸ್ತೆ, ಧಾರವಾಡ-580008
**Phone: (Off) - 0836- 2447092** **email:** dcf_dwd@yahoo.co.in

ಸಂಖ್ಯೆ:ಎ2/ಬಿಜಿಟಿ/Maintenance/Residence/ಸಿಆರ್-13/2019-20 ದಿನಾಂಕ: 30-05-2019

# ಇ-ಟೆಂಡರ್ ಅಧಿಸೂಚನೆ

## ಧಾರವಾಡ ವಿಭಾಗ ವ್ಯಾಪ್ತಿಯ ಧಾರವಾಡ ನಗರದ ಅರಣ್ಯ ಸಂಕೀರ್ಣದಲ್ಲಿರುವ ವಸತಿ ಗೃಹಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಾಗಿ ಇ-ಟೆಂಡರ ಪ್ರಕಟಣೆ

**(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

**********

ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವದೇನೆಂದರೆ, **ಧಾರವಾಡ ವಿಭಾಗ ವ್ಯಾಪ್ತಿಯ ಧಾರವಾಡ ನಗರದ ಅರಣ್ಯ ಸಂಕೀರ್ಣದಲ್ಲಿರುವ ವಸತಿ ಗೃಹಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಾಗಿ** ಕರ್ನಾಟಕ ಪಾರದರ್ಶಕ ಕಾಯ್ದೆ-1999 & ನಿಯಮ 2000 ರಂತೆ 2019-20 ನೇ ಸಾಲಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ **ಇ-ಟೆಂಡರ್ (Single Cover)** ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಲೋಕೋಪಯೋಗಿ ಇಲಾಖೆಯ 1 ನೇ (ಒಂದು) ದರ್ಜೆಯ ಗುತ್ತಿಗೆದಾರರೆಂದು ನೊಂದಾಯಿಸಿಕೊಂಡಿರುವ ಗುತ್ತಿಗೆದಾರರು ಸದರಿ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ.

### ಅನುಬಂಧ -1 ಕಾಮಗಾರಿಯ ವಿವರ

| ಯುನಿಟ್ ಸಂಖ್ಯೆ | ವಲಯ | ಸ್ಥಳ ಮತ್ತು ಸ.ನಂ | ನಿಗದಿ ಪಡಿಸಿದ ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ 2.5% ಲಕ್ಷಗಳಲ್ಲಿ | ಕಾಮಗಾರಿಯ ಮುಕ್ತಾಯ ದಿನಾಂಕ | ಲೆಕ್ಕ ಶೀರ್ಷಿಕೆ |
|---|---|---|---|---|---|---|
| 1 | ಧಾರವಾಡ | ಅರಣ್ಯ ಸಂಕೀರ್ಣ ಸಿಟಿ ಸರ್ವೆನಂ-6/ಎ/1 | 13.80 | 0.276 | 31-11-2019 | 2406-01-070-0-05-200-Maintenance Residential Quarters. |

### ಅನುಬಂಧ-2 ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆಯ ವೇಳಾ ಪಟ್ಟಿ

| | | |
|---|---|---|
| LAST DATE & TIME FOR RECEIPT OF TECHNICAL & FINANCIAL BID | : | 26.06.2019 at 16.00 Hrs |
| DATE & TIME OF OPENING TECHNICAL & FINANCIAL BID | : | 27.06.2019 at 16 :30 Hrs |
| IN CASE NO BID IS RECEIVED ON THE SCHEDULED DATE: SECOND TIME TENDER IS CALLED ON : LAST DATE & TIME FOR RECEIPT OF TECHNICAL & FINANCIAL BID | : | 28.06.2019 at 16.00 Hrs 02 Days extension of Last Date. |
| DATE & TIME OF OPENING TECHNICAL & FINANCIAL BID | : | 29.06.2019 at 16.30 Hrs |

**ಸೂಚನೆ: ಒಂದು ವೇಳೆ ಮೇಲೆ ತಿಳಿಸಿದ ಟೆಂಡರ್ ಪ್ರಕ್ರಿಯೆ ದಿನಾಂಕದಂದು ರಜಾ ದಿನಗಳೆಂದು ಘೋಷಿಸಿದಲ್ಲಿ ಮುಂದಿನ ಕೆಲಸದ ದಿನ ಮತ್ತು ಅದೇ ವೇಳೆಗೆ ಟೆಂಡರ್ ಪ್ರಕ್ರಿಯೆ ಜರುಗಿಸಲಾಗುವುದು.**

ಅರ್ಜಿದಾರರು ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in ಯಿಂದ ಉಚಿತವಾಗಿ ಡೌನಲೋಡ ಮಾಡಿಕೊಳ್ಳಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಧಾರವಾಡ ವಿಭಾಗ, ಧಾರವಾಡ.

**ಧಾರವಾಡ ವಿಭಾಗ ವ್ಯಾಪ್ತಿಯ ಧಾರವಾಡ ನಗರದ ಅರಣ್ಯ ಸಂಕೀರ್ಣದಲ್ಲಿರುವ ವಸತಿ ಗೃಹಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಾಗಿ ಇ-ಟೆಂಡರ (Single Cover) ಅಧಿಸೂಚನೆ ಪ್ರಕಟಣೆಗೆ ಸಂಬಂಧಿಸಿದ ಷರತ್ತುಗಳು ಕೆಳಗಿನಂತಿವೆ**

1. ಈ ಟೆಂಡರ್‌ನ್ನು ಇ-ಪೋರ್ಟಲನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಸಮಯವು ಅನುಬಂಧ-2 ರಲ್ಲಿನ ವೇಳಾಪಟ್ಟಿಯಂತೆ ಇರುತ್ತದೆ.
2. ತಾಂತ್ರಿಕ ಮತ್ತು ಆರ್ಥಿಕ ಬಿಡ್ ಪರಿಶೀಲನೆ ಸಂದರ್ಭದಲ್ಲಿ ಪ್ರಸ್ತುತ ಟೆಂಡರನಲ್ಲಿ ನಮೂದಿಸಿರುವ ದಾಖಲಾತಿಗಳಲ್ಲದೇ ಇನ್ನಿತರೆ ದಾಖಲಾತಿಗಳ ಅವಶ್ಯಕತೆ ಕಂಡುಬಂದಲ್ಲಿ ಈ ಕಛೇರಿಯಿಂದ ಸದರಿ ದಾಖಲೆಗಳನ್ನು ಒದಗಿಸಲು ಕೋರಲಾಗುವುದು. ಸದರ ದಾಖಲಾತಿಗಳನ್ನು ಒದಗಿಸಿದ ನಂತರ ಅರ್ಹರಿದ್ದಲ್ಲಿ ಮಾತ್ರ ಬಿಡ್‌ನ್ನು ಪರಿಗಣಿಸಲಾಗುವುದು.
3. ಲೋಕೋಪಯೋಗಿ ಇಲಾಖೆಯ 1 ನೇ (ಒಂದು) ದರ್ಜೆಯ ಗುತ್ತಿಗೆದಾರರು ಮಾತ್ರ ಈ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ.
4. ಟೆಂಡರ್‌ದಾರರು ಅನುಬಂಧ-1 ರಲ್ಲಿ ನಮೂದಿಸಿರುವ ಯೂನಿಟ್‌ಗೆ ಟೆಂಡರ್ ಸಲ್ಲಿಸುವುದು. ಸದರಿ ಯೂನಿಟ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಇ-ಪೋರ್ಟಲ್‌ನಲ್ಲಿ ತಿಳಿಸಿರುವ ಯಾವುದಾದರು ಒಂದು ರೀತಿಯಲ್ಲಿ ಇರತಕ್ಕದ್ದು ಮತ್ತು ಬಿಡ್‌ನ ಅವಧಿಯು ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಠ 90 ದಿನಗಳವರೆಗೆ ಇರತಕ್ಕದ್ದು. ಇ.ಎಂ.ಡಿ. ಇಟ್ಟಿರುವ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
5. ಟೆಂಡರಿನಲ್ಲಿಡಲಾದ ಕಾಮಗಾರಿಗೆ ಅನುದಾನದ ಲಭ್ಯತೆಯ ಮೇರೆಗೆ ಟೆಂಡರ್ ಕರೆಯಲಾಗಿದ್ದು, **ಪ್ರಸ್ತುತ ವರ್ಷ 2019-20 ನೇ ಸಾಲಿಗೆ ಪೂರ್ಣ ಪ್ರಮಾಣದ ಅನುದಾನ ಲಭ್ಯವಾಗದಿದ್ದಲ್ಲಿ, 2020-21 ನೇ ಆರ್ಥಿಕ ವರ್ಷದಲ್ಲಿ ಬಾಕಿ ಅನುದಾನವೆಂದು ಪರಿಗಣಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು, ಆದರೆ ಪ್ರಸ್ತುತ ಕಾಮಗಾರಿಯನ್ನು ಅನುಬಂಧ-1 ರಲ್ಲಿ ತಿಳಿಸಿದ ಅವಧಿಯಲ್ಲಿ ಪೂರ್ಣಗೊಳಿಸುವದು ಯಶಸ್ವಿ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.**
6. ಟೆಂಡರಿನಲ್ಲಿಡಲಾದ ಕಾಮಗಾರಿಗೆ ಅನುದಾನ ಬಿಡುಗಡೆ ಆಗದೇ ಇದ್ದಲ್ಲಿ ಅಥವಾ ಬಿಡುಗಡೆಗೆ ವಿಳಂಬವಾದಲ್ಲಿ ಸದರ ಕಾಮಗಾರಿಗಳನ್ನು ಮುಂದೂಡಲಾಗುವುದು ಅಥವಾ ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.
7. ಟೆಂಡರ್‌ದಾರರು ಅನುಬಂಧ-1 ರಲ್ಲಿ ನಮೂದಿಸಿರುವ ಸ್ಥಳಕ್ಕೆ ಭೇಟಿ ನೀಡಲು ಇಚ್ಛಿಸಿದಲ್ಲಿ ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಯನ್ನು ಸಂಪರ್ಕಿಸುವುದು.
8. ಟೆಂಡರ್‌ದಾರರು ಸೂಚಿಸುವ ದರಗಳು ಎಲ್ಲಾ ತೆರಿಗಗಳು ಹಾಗೂ ಸಾಗಾಣಿಕೆ ವೆಚ್ಚವನ್ನು ಸೇರಿ ಒಟ್ಟಾರೆ ದರ ನಮೂದಿಸುವುದು.
9. ಟೆಂಡರ ಪ್ರಕ್ರಿಯೆಯ ತಾಂತ್ರಿಕ ಬಿಡ್‌ನಲ್ಲಿ ಈ ಕೆಳಕಾಣಿಸಿದ ದಾಖಲೆಗಳನ್ನು ಸಹಿಮಾಡಿ, ಸ್ಕ್ಯಾನ್ ಮಾಡಿ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು. ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಟೆಂಡರ್ ತೆರೆದ ದಿನಾಂಕದಂದು ಈ ಕೆಳ ಸಹಿದಾರರ ಪರಿಶೀಲನೆಗೆ ಸಲ್ಲಿಸುವುದು.
    a. ಚಾಲ್ತಿಯಲ್ಲಿರುವ ಆದಾಯ ಕರ ಮತ್ತು ಸರಕು ಹಾಗೂ ಸೇವಾ ತೆರಿಗೆ (GST) ನೋಂದಣಿ ಪ್ರಮಾಣ ಪತ್ರ.
    b. ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಆದಾಯ ಮತ್ತು ನಷ್ಟದ ಬಗ್ಗೆ ಚಾರ್ಟರ್ಡ ಅಕೌಂಟಂಟ್‌ರವರಿಂದ ಅಡಿಟ್ ಮಾಡಿಸಲಾದ ಬ್ಯಾಲೆನ್ಸ್ ಶೀಟ್ ಪ್ರಮಾಣ ಪತ್ರದ ಪ್ರತಿಗಳನ್ನು ಸಲ್ಲಿಸುವುದು
    c. ಕಳೆದ ಮೂರು ವರ್ಷಗಳ ಆದಾಯ ತೆರಿಗೆ ರಿಟರ್ನ್ಸಗಳನ್ನು ಫೈಲ್ ಮಾಡಿದ ಬಗ್ಗೆ ದಾಖಲಾತಿಗಳು.
    d. ಅರಣ್ಯ ಇಲಾಖೆ / ಸರಕಾರದ ವಿವಿಧ ಇಲಾಖೆಯಲ್ಲಿ ಗುತ್ತಿಗೆದಾರರು **ಕಳೆದ ಮೂರು ವರ್ಷಗಳಲ್ಲಿ** ಒಳಚರಂಡಿ ನಿರ್ಮಾಣ/ ಸಿವಿಲ್ ಕಾಮಗಾರಿ ಕೈಗೊಂಡಿರುವ ಕುರಿತು ಅನುಭವದ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು, ಹಾಗೂ ಟೆಂಡರ್ ಹಾಕುವ ಕಾಮಗಾರಿ ಮೊತ್ತಕ್ಕೆ ಸಮನಾಗಿ ಅಥವಾ ಅದಕ್ಕಿಂತ ಹೆಚ್ಚು ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವ ಗುತ್ತಿಗೆದಾರರಿಗೆ ಆದ್ಯತೆ ನೀಡಲಾಗುವುದು.
    e. ಪಾನ್ ಕಾರ್ಡ ಪ್ರತಿ.
    f. ಪಿ.ಎಫ್ ನೋಂದಣಿ ಪ್ರಮಾಣಪತ್ರ.
    g. ಲೋಕೊಪಯೋಗಿ ಇಲಾಖೆಯಲ್ಲಿ ಕ್ಲಾಸ್-1 ಗುತ್ತಿಗೆದಾರರೆಂದು ನೊಂದಾಯಿಸಿಕೊಂಡಿರುವ ಬಗ್ಗೆ ಪ್ರಮಾಣ ಪತ್ರ.
    h. ಗುತ್ತಿಗೆದಾರರು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ವಿವರಗಳನ್ನು ನೀಡುವುದು.

i. ಗುತ್ತಿಗೆದಾರರು ತಮ್ಮ ಅಧೀನದಲ್ಲಿ ಕಾರ್ಯಾಚರಿಸುತ್ತಿರುವ ವಾಹನಗಳ ವಿವರಗಳನ್ನು ನೀಡುವುದು.
j. ಗುತ್ತಿಗೆದಾರರು ಉಳಿತಾಯ / ಚಾಲ್ತಿ ಬ್ಯಾಂಕ್ ಖಾತೆಗಳ ವಿವರಗಳನ್ನು ನೀಡುವುದು.

10. ಯಶಸ್ವಿ ಬಿಡ್‌ದಾರರಿಗೆ ಈ ಕಚೇರಿಯಿಂದ ನೀಡುವ ಸೂಚನೆ ತಲುಪಿದ ಮೂರು (3) ದಿನಗಳೊಳಗಾಗಿ ಕರಾರುನಾಮೆ ಮಾಡಿಕೊಳ್ಳಲು ರೂ.200/- ಮೌಲ್ಯದ ಛಾಪಾ ಕಾಗದದೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಧಾರವಾಡ ಇವರ ಮುಂದೆ ಕರಾರುನಾಮೆ ಮಾಡಿಕೊಳ್ಳುವುದು.
11. ಛಾಪಾ ಕಾಗದದೊಂದಿಗೆ ಯಶಸ್ವಿ ಬಿಡ್‌ದಾರರು ಗುತ್ತಿಗೆ ಮೌಲ್ಯದ ಶೇಕಡಾ 5% ರಂತೆ (ಅಂದರೆ ರೂ. 70,000/- ಗಳನ್ನು) ನಿರ್ವಹಣಾ ಭದ್ರತಾ ಠೇವಣಿಯನ್ನು ಈ ಕೆಳ ಸಹಿದಾರರ ಪದನಾಮದಲ್ಲಿ ಬ್ಯಾಂಕ ಗ್ಯಾರಂಟಿ ರೂಪದಲ್ಲಿ ಅಂದರೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ಇವರ ಸೂಚನೆಯಂತೆ ಭರಣಾ ಮಾಡುವುದು. ಸದರಿ ಭದ್ರತಾ ಠೇವಣಿಯನ್ನು ಕಾಮಗಾರಿ ಮುಕ್ತಾಯವಾದ **ಒಂದು ವರ್ಷದ** ನಂತರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಸರಣಾ ವರದಿಯ ಮೇಲೆ ಹಿಂದಿರುಗಿಸಲಾಗುವುದು. ಭದ್ರತಾ ಠೇವಣಿ ಇಟ್ಟಿರುವ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
12. ಸದರಿ ಯೂನಿಟ್‌ಗೆ ಒಬ್ಬರಿಗಿಂತ ಹೆಚ್ಚು ಗುತ್ತಿಗೆದಾರರು ಎಲ್-1 ಅರ್ಹತೆ ಪಡೆದಲ್ಲಿ, ಅವರ ಹಿಂದಿನ ಕಾರ್ಯ ಸಾಧನೆ ಹಾಗೂ ಆರ್ಥಿಕ ಸಾಮರ್ಥ್ಯವನ್ನು ಪರಿಶೀಲಿಸಿ ಟೆಂಡರ್ ಅನುಮೋದಿಸಲು ಕ್ರಮ ಕೈಗೊಳ್ಳಲಾಗುವುದು.
13. ಗುತ್ತಿಗೆದಾರರು ಟೆಂಡರ ದರಕ್ಕಿಂತ ಕಡಿಮೆ ಬಿಡ್ ಮಾಡಿದಲ್ಲಿ ಟೆಂಡರ ಮೊತ್ತಕ್ಕೆ ಬಾಕಿ ಉಳಿಯುವ ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿ ಠೇವಣಿಯನ್ನಾಗಿ ಇರಿಸುವುದು. ಸದರಿ ವ್ಯತ್ಯಾಸದ ಠೇವಣಿಯನ್ನು ಕಾಮಗಾರಿ ಮುಕ್ತಾಯವಾದ ನಂತರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವರದಿಯ ಮೇಲೆ ಹಿಂದಿರುಗಿಸಲಾಗುವುದು. ಸದರ ಹಣಕ್ಕೆ ಯಾವುದೇ ಬಡ್ಡಿಯನ್ನ ನೀಡಲಾಗುವುದಿಲ್ಲ.
14. ಟೆಂಡರ ಮೊತ್ತದ ಶೇ. 10 ಕ್ಕಿಂತ ಕಡಿಮೆ ಬಿಡ್ ಮಾಡಿದ ಗುತ್ತಿಗೆದಾರರ ಬಿಡ್‌ನ್ನು ಪರಿಗಣಿಸುವುದಿಲ್ಲ.
15. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ಯಾವುದೇ ಕಾರಣ ಕೊಡದೇ ಮಂಜೂರು ಮಾಡುವ ಅಥವಾ ನಿರಾಕರಿಸುವ ಅಥವಾ ಟೆಂಡರ ಕೈಕೊಳ್ಳುವ ಪೂರ್ತಿ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಧಾರವಾಡ ಇವರು ಹೊಂದಿರುವರು.
16. ಯಶಸ್ವಿ ಟೆಂಡರ್‌ದಾರರು ನಿಗದಿತ ಅವಧಿಯೊಳಗೆ ಕೆಲಸಗಳನ್ನು ಪೂರ್ತಿಗೊಳಿಸಿ, ನಿಯಮಾನುಸಾರ ಬಿಲ್ಲುಗಳನ್ನು ತಯಾರಿಸಿ ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳಿಗೆ ಸಲ್ಲಿಸುವದರೊಂದಿಗೆ, ಎಂ.ಬಿ.ಯಲ್ಲಿ ಸಂಬಂಧಿಸಿದ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅಳವು ಮಾಪನ ಮಾಡಿಸಿ ಈ ಕಛೇರಿಗೆ ಸಲ್ಲಿಸಿದ ನಂತರ ಅನುದಾನ ಲಭ್ಯತೆಯ ಆಧಾರದ ಮೇಲೆ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
17. ಯಶಸ್ವಿ ಟೆಂಡರ್‌ದಾರರು ಕೆಲಸ ಪ್ರಾರಂಭಿಸಿದ ನಂತರ ನಿಗದಿತ ಅವಧಿಯೊಳಗೆ ಕೆಲಸ ಪೂರ್ಣಗೊಳಿಸದೇ ಇದ್ದಲ್ಲಿ, ಅಥವಾ ಕಳಪೆ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಅಂತಹ ಟೆಂಡರುದಾರರಿಗೆ ನೀಡಿರುವ ಕಾರ್ಯಾದೇಶ ಹಿಂದಕ್ಕೆ ಪಡೆಯಲಾಗುವುದು ಮತ್ತು ಅಂತಹ ಕೆಲಸಗಳಿಗೆ ಯಾವುದೇ ಹಣ ಪಾವತಿಸಲಾಗುವುದಿಲ್ಲ ಮತ್ತು ಅವರು ಇಟ್ಟಂತಹ ಭದ್ರತಾ ಠೇವಣಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಸದರಿಯವರ ಹೆಸರನ್ನು ಮುಂದಿನ ಮೂರು (3) ಆರ್ಥಿಕ ವರ್ಷಗಳ ಅವಧಿಗೆ ಕಪ್ಪು ಪಟ್ಟಿಗೆ ಸೇರಿಸಲಿ ಕ್ರಮ ಜರುಗಿಸಲಾಗುವುದು.
18. ಕಾಮಗಾರಿಯ ವೇಳೆ ಎಲ್ಲ ರೀತಿಯ ಸುರಕ್ಷತಾ ಸಾಧನಗಳನ್ನು ಇಟ್ಟುಕೊಳ್ಳುವುದು. ರಾತ್ರಿ ವೇಳೆ ಸಾಧನ ಸಾಮಗ್ರಿಗಳ ಪರಿಕರಗಳಿಗೆ ಕಾವಲು ಕಾಯುವ ಸಿಬ್ಬಂದಿಗಳನ್ನು ಟೆಂಡರ್‌ದಾರರೇ ನೇಮಕ ಮಾಡಿಕೊಳ್ಳುವುದು. ಈ ಬಗ್ಗೆ ಇಲಾಖೆಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.
19. ಕಾಮಗಾರಿಯ ವೇಳೆ ಟೆಂಡರ್‌ದಾರರು ನೇಮಿಸಿದ ಕಾರ್ಮಿಕರಿಗೆ ಯಾವುದೇ ರೀತಿ ಪ್ರಾಣಾಪಾಯ/ಹಾನಿ ಉಂಟಾದಲ್ಲಿ ಅದಕ್ಕೆ ಟೆಂಡರ್‌ದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಇಲಾಖೆಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.
20. ಕಾರ್ಯಾದೇಶ ನೀಡಿದ ದಿನಾಂಕದಿಂದ 31-11-2019 ರೊಳಗಾಗಿ ಕಾಮಗಾರಿಗಳನ್ನು ತಪ್ಪದೇ ಪೂರ್ಣಗೊಳಿಸಬೇಕಾಗಿರುತ್ತದೆ.
21. ಈ ಕಾಮಗಾರಿಗೆ ಟೆಂಡರ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ನೀಡಲಾಗುವುದಿಲ್ಲ. ಹೆಚ್ಚಿನ ಮೊತ್ತ ನಮೂದಿಸಿದಲ್ಲಿ ತಿರಸ್ಕರಿಸಲಾಗುವುದು.
22. ಮಂಜೂರಾದ ಅಂದಾಜು ಪತ್ರಿಕೆಗಳನುಸಾರ ಅಳವು ಮಾಪನ ಮಾಡಿದ ನಂತರ ಅನುದಾನ ಲಭ್ಯತೆಗೆ ಅನುಸಾರ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಲಾಗುವುದು. ಅಂದಾಜು ಪತ್ರಿಕೆಯನ್ನು 2016-17 ನೇ ಸಾಲಿನ ಧಾರವಾಡ ವೃತ್ತದ ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರಗಳಂತೆ ತಯಾರಿಸಲಾಗಿದ್ದು ಎಸ್.ಆರ್. ದರಗಳು ಪರಿಷ್ಕೃತವಾದಲ್ಲಿ ಗುತ್ತಿಗೆದಾರರು ಯಾವ ಎಸ್.ಆರ್. ದರಗಳಿಗೆ ಬಿಡ್ ಮಾಡಿರುತ್ತಾರೋ ಅದೇ ಮೊತ್ತವನ್ನು ಪಾವತಿಸಲಾಗುವುದು. ಅಂದಾಜು ಪತ್ರಿಕೆಯಲ್ಲಿ ಯಾವುದೇ ಐಟಂಗಳು ಬಿಟ್ಟು ಹೋದಲ್ಲಿ ಅವುಗಳನ್ನು ಗುತ್ತಿಗೆದಾರರು ಮಂಜೂರಾದ ಟೆಂಡರ್ ಮೊತ್ತದಲ್ಲಿಯೇ ಮಾಡಿ ಮುಗಿಸುವುದು. ಕಾಮಗಾರಿಗೆ ಹೆಚ್ಚುವರಿಯಾಗಿ ಯಾವುದೇ ಮೊತ್ತವನ್ನು ಪಾವತಿಸಲಾಗುವುದಿಲ್ಲ.

23. ತಾಂತ್ರಿಕ ಕಾಮಗಾರಿಗಳನ್ನು ಅರ್ಹ ವ್ಯಕ್ತಿಗಳಿಂದ ಮಾಡಿಸಿಕೊಳ್ಳುವುದು. ಒಂದು ವೇಳೆ ಸದರಿ ಕಾಮಗಾರಿಯ ಗುಣಮಟ್ಟ ಸರಿಯಾಗಿಲ್ಲದಿದ್ದಲ್ಲಿ ಹಣ ಪಾವತಿಸಲಾಗುವುದಿಲ್ಲ. **ನಿಯಮಾನುಸಾರ ಮೂರನೇ ವ್ಯಕ್ತಿಯಿಂದ ವಿವಿಧ ಹಂತಗಳಲ್ಲಿ ಕಾಮಗಾರಿಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದಲ್ಲಿ ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.** ಸದರಿ ಕೆಲಸಕ್ಕೆ ಯಾವುದೇ ರೀತಿಯ ಹಣ ಪಾವತಿಸಲಾಗುವುದಿಲ್ಲ.
24. ಗುತ್ತಿಗೆದಾರರು ಕರಾರುನಾಮೆಗೆ ಸಹಿ ಹಾಕಿದ ನಂತರ ಮೃತಪಟ್ಟಲ್ಲಿ ಅವರ ವಾರಸುದಾರರು ನೊಂದಾಯಿತ ಗುತ್ತಿಗೆದಾರರಾಗಿದ್ದಲ್ಲಿ ಅವರು ಸದರಿ ಕೆಲಸವನ್ನು ಮುಂದುವರೆಸಿ ಕಾಮಗಾರಿಯನ್ನು ನಿಗದಿತ ದರದಲ್ಲಿ ಮುಕ್ತಾಯಗೊಳಿಸಬಹುದು. ಇಲ್ಲವಾದಲ್ಲಿ ಸದರಿ ಕಾಮಗಾರಿಯ ಕಾರ್ಯಾದೇಶವನ್ನು ರದ್ದುಪಡಿಸಿ ಮತ್ತೊಬ್ಬ ಅರ್ಹ/ ಟೆಂಡರ್‌ನಲ್ಲಿ ಕಡಿಮೆ ನಮೂದಿಸಿದ ಅಥವಾ ಎಲ್–1 ನಮೂದಿಸಿರುವ ಮೊತ್ತಕ್ಕೆ ಒಪ್ಪಿಕೊಳ್ಳುವ ಗುತ್ತಿಗೆದಾರರಿಗೆ ಕಾಮಗಾರಿಯ ಕಾರ್ಯಾದೇಶ ನೀಡಲಾಗುವುದು. ಆದರೆ ಮರಣ ಹೊಂದಿದ ಗುತ್ತಿಗೆದಾರರ ಭದ್ರತಾ ಠೇವಣಿ ಹಾಗೂ ವ್ಯತ್ಯಾಸದ ಮೊತ್ತವನ್ನು ಪಾವತಿ ಮಾಡಲಾಗುವುದಿಲ್ಲ. ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
25. ಯಾವುದೇ ಕಾರಣದಿಂದ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ ಒಂದು ವೇಳೆ ನಿಗದಿತ ಕಾಲಾವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಉಪ ಅರಣ್ಯ ಸರಂಕ್ಷಣಾಧಿಕಾರಿಗಳು ವಿಧಿಸುವ ದಂಡಕ್ಕೆ ಬದ್ಧರಾಗಿ, ಉಪ ಅರಣ್ಯ ಸಂರಕ್ಷಣಾಧಿಕರಿಗಳಿಂದ ಲಿಖಿತ ಕಾಲ ವಿಸ್ತರಣೆ ಆದೇಶ ಪಡೆದುಕೊಳ್ಳತಕ್ಕದ್ದು. ಕಾಲ ವಿಸ್ತರಣೆ ಪಡೆದಲ್ಲಿ ಬಿಲ್ಲಿನ ಮೊತ್ತದಲ್ಲಿ ಶೇ.5% ಮೊತ್ತವನ್ನು ಕಡಿತಗೊಳಿಸಲಾಗುವುದು. ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ತೀರ್ಮಾನವೇ ಅಂತಿಮವಾಗಿರುತ್ತದೆ.
26. ಭಾಗಶಃ ಕೆಲಸ / ಅಪೂರ್ಣ ಕಾಮಗಾರಿ ಮಾಡಿದ ಪ್ರಸಂಗದಲ್ಲಿ ಅಂತಹ ಭಾಗಶಃ / ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡುವುದಿಲ್ಲ. ಅಲ್ಲದೇ ಟೆಂಡರ್‌ದಾರರ ಸ್ವಜವಾಬ್ದಾರಿಯ ಮೇಲೆ ಕಾಮಗಾರಿಯನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು ಅಲ್ಲದೇ ಸದರಿ ಗುತ್ತಿಗೆದಾರರ ಭದ್ರತಾ ಠೇವಣಿ ಹಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
27. ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವಿಭಾಗ, ಧಾರವಾಡ ಇವರು ಟೆಂಡರಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
28. ಟೆಂಡರನ್ನು ಮುಂಗಡವಾಗಿ ಕರೆಯಲಾಗಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ವಲಯ ಅರಣ್ಯ ಅಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ವರದಿಯನ್ನು ಆಧರಿಸಿ ಹಾಗೂ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಯ ಬಾಬ್ತು ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗುವುದು.
29. ಕಾಮಗಾರಿ ಕೈಗೊಳ್ಳುವ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳನ್ನು ತಪ್ಪಿಸಲು ಎಲ್ಲಾ ಸುರಕ್ಷತಾ ಕ್ರಮಗಳು, ಮುನ್ನೆಚ್ಚರಿಕೆ ಫಲಕಗಳು, ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆದಾರರೇ ನೇಮಿಸಿಕೊಳ್ಳುವುದು. ಒಂದು ವೇಳೆ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಅದಕ್ಕೆ ಗುತ್ತಿಗೆದಾರರೇ ಹೊಣೆಗಾರರಾಗುತ್ತಾರೆ.
30. ಹೆಚ್ಚಿನ ವಿವರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಧಾರವಾಡ ಇವರ ಕಚೇರಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.
31. ಯುಕ್ತ ಪ್ರಾಧಿಕಾರಿ (Competent Authority)/ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಧಾರವಾಡರವರು ಇ–ಪ್ರೊಕ್ಯೂರ್‌ಮೆಂಟ್‌ನ್ನು ಯಾವುದೇ ಮುನ್ಸೂಚನೆ, ಯಾವುದೇ ಕಾರಣವಿಲ್ಲದೇ ಹಿಂತೆಗೆದುಕೊಳ್ಳುವ ಹಾಗೂ ಯಾವುದೇ ಸಕಾರಣವಿಲ್ಲದೇ ಮುಂದೂಡುವ ಮತ್ತು ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ರೀತಿಯ ಬದಲಾವಣೆ / ತಿದ್ದುಪಡಿ ಮಾಡುವ ಪೂರ್ಣ ಅಧಿಕಾರ ಹೊಂದಿರುತ್ತಾರೆ. ಹಾಗೂ ಟೆಂಡರ್ ಹಿಂಪಡೆದ ನಂತರ ಟೆಂಡರ್ ಪ್ರೊಸ್ಸೆಸಿಂಗ್ ಫೀ ಶುಲ್ಕ ಹಾಗೂ ಇ.ಎಂ.ಡಿ ಮೊತ್ತಕ್ಕೆ ಈ ಕೆಳ ಸಹಿದಾರರು ಜವಾಬ್ದಾರರಾಗುವುದಿಲ್ಲ.
32. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವೃತ್ತರವರು ಟೆಂಡರ್ ಆಹ್ವಾನಿಸುವ ಹಾಗೂ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಿ ಆಗಿರುತ್ತಾರೆ.
33. ಈ ಮೇಲಿನ ನಿಬಂಧನೆಗಳೊಂದಿಗೆ ಕಾಲಕಾಲಕ್ಕೆ ಅವಶ್ಯವೆನಿಸಿದಲ್ಲಿ ಇನ್ನೂ ಹೆಚ್ಚಿನ ನಿಬಂಧನೆಗಳನ್ನು ಸೇರಿಸುವ ಅಥವಾ ತೆಗೆದುಹಾಕುವ ಅಥವಾ ಇವುಗಳನ್ನು ಮಾರ್ಪಾಡು ಮಾಡುವ ಅಥವಾ ಯಾವುದೇ ಸಂದರ್ಭದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಧಾರವಾಡ ಇವರು ಹೊಂದಿರುವರು.
34. ಟೆಂಡರ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾದಿಕಾರಿ, (ಪ್ರಾದೇಶಿಕ) ಧಾರವಾಡ ವೃತ್ತ ಧಾರವಾಡ. ಇವರು ಮೇಲ್ಮನವಿ ಪ್ರಾಧಿಕಾರಿಗಳಾಗಿದ್ದು ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು ಧಾರವಾಡ, ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತವೆ.

## Technical Conditions to be uploaded in e-tender portal :

a. Contractors registration Certificate issued by PWD for Class-I Only.
b. PAN card of the Tenderer.
c. GST Registration of the Tenderer .

d. Balance Sheet of the last three financial years (Profit & Loss Sheet prepared by the Chartered Accountant).
e. PF Registration Certificate.
f. I.T. returns Certificate of last three financial years.
g. Work done / satisfactory certificate issued by Forest Department / Other Government Department for Carried out UGD Construction/ Civil Works of Tender amount or Higher (Priority will be given for the said works)
h. Authorised Bank Account Details of Forest Contractors.
i. Details of Labours working under Forest Contractors.
j. Details of Machineries working under Forest Contractors.

## Special Conditions of the Tender:

1. Tenders from Joint ventures are not acceptable.
2. Bidders shall not be under a declaration of ineligibility for corrupt and fraudulent practices issued by Government of Karnataka.
3. The Bidder shall ensure credit of Tender Processing Fee and EMD into the respective receiving bank account of e-Procurement on or before the last date of bid submission. The EMD amount is 2.5% of the estimated amount. No interest will be paid for the EMD amount.
4. The tenderer is required to ensure browser compatibility of the computer well in advance to the last date and time for receipt of tenders. The departments shall not be responsible for non-accessibility of e-Procurement portal due to internet connectivity issued and technical glitches.
5. The details of works shown in the estimates / data sheet are indicative, they may change based on field conditions and other factors. Such works shall be executed by successful tenderer without extra payment.
6. Conditional tenders will not be accepted.
7. The tenderer shall bear all costs associated with the preparation and submission of his tender and the employer will in no case be responsible and liable for those costs.
8. The cost of the Tender processing fee shall not be refundable.
9. The employer is not responsible for any delay in accessing E-Procurement Portal.
10. Applicable taxes will be deducted as per prevailing Government orders.
11. All scanned original documents to be uploaded and the Deputy Conservator of Forests, Dharwad Division, Dharwad reserves the right to verify the documents before approval.
12. The Tender Inviting/Accepting Authority (DCF, Dharwad / CCF, Dharwad) reserves the rights to reject or accept any or all the tenders without assigning any reasons.
13. In the case of the death of the contractor after executing the agreement / commencement of the work, his legal heir, if is an eligible registered contractor and is willing can execute and complete the work at the accepted tender rates irrespective of the cost of the work.
14. The successful tenderer shall deliver to the Employer a security deposit for an amount equivalent to 5% of working rate (Rs: 70,000.00) and if that rate is lowest, then the tenderer will be called upon to pay the difference of the rate quoted by him below before the agreement.
15. Not Considering less than Ten Percent of the tender amount of Bidder.
16. Contractor should carryout additional test required to test the suitability of materials.
17. All safety precautions, warning signs, night illumination, refractor, deployment of security guards wherever necessary has to be ensured so that no untoward incident happens on account of negligence or any project activity. Contractor should indemnify the client to that extent.
18. Contractor should follow strictly the prevailing rules of labor Act.
19. All precautions should be taken by the contractor so that there are no damages to such public / private properties.
20. Further particulars like detailed estimates, detailed conditions, if any, required by the Contractor can be taken from the office of Deputy Conservator of Forests, Dharwad Division, Dharwad during office hours on all working days.

21. Contractor should adhere to HSC (Health Safety Environment) policy applicable for similar projects. Contractor to the extent should submit HSC document defining all the procedure including the policies before execution of the project.
22. The estimate indicated in the Schedule-1 of the e-procurement platform is tentative and is subject to the approval of the competent authorities.
23. The competent Authority i.e. Deputy Conservator of Forests, Dharwad Division, Dharwad reserves the right to make modification with regard to the estimate based on the field requirement of the concerned works. Such works shall be executed by the contractor without any extra payment.
24. Payment will be done based on the scrutinized and sanctioned estimates and the check measurement by the competent authority as per the Forest codes.
25. The Deputy Conservator of Forests, Dharwad Division, Dharwad will be the final authority with regard to the evaluation of technical qualification criteria.
26. Irrespective of the date of completion of the work the payment will be done to the successful tenderer only as per the approved SSR rates of concerned department for the concerned year and the rate quoted by the successful tenderer. No escalation in the rates quoted would be considered.
27. The competent authority i.e. Deputy Conservator of Forests, Dharwad Division, Dharwad shall have the right to cancel the entire process of tender through e-procurement without assigning any reason whatsoever. In such circumstances, the tenderer shall not be eligible for any interest on the EMD amount paid by him. Further the Deputy Conservator of Forests, Dharwad Division, Dharwad would not be liable to pay any cost which the tenderer may have borne with regard to the submission of the tender and its processes. In case of cancellation of the tender, the Tender Processing Fee paid to the e-procurement platform is not refundable.
28. Some of the mentioned works in the tender are called on expecting the issue of allotment. However if the allotment are not received to the particular works, then the tender will be cancelled as per the above condition.
29. The Tender will be subject to third party inspection, the report shall be submitted to DCF Dharwad by the successful tenderer as and when required. No payment will be made for such works and report
30. The earnest money deposit may be forfeited :
    a. If the Tenderer withdraws the Tender after tender opening during the period of tender validity ;
    b. If the Tenderer does not accept the correction of the Tender Price;
    c. In the case of successful tenderer, if the tenderer fails within the specified time limit to
        i. sign the Agreement or,
        ii. furnish the required Security deposit.
    d. If the documents submitted by tenderer found to be misleading / forged / fake.

(ಡಿ. ಮಹೇಶ ಕುಮಾರ. **ಭಾ.ಅ.ಸೇ**)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಧಾರವಾಡ ವಿಭಾಗ, ಧಾರವಾಡ.

# ಅನುಬಂಧ–3

## "ಇ ಟೆಂಡರ್ ತಾಂತ್ರಿಕ ಬಿಡ್ ಅರ್ಜಿ ನಮೂನೆ"

ಸಂಖ್ಯೆ:– ದಿನಾಂಕ:

ಇಂದ:

ಶ್ರೀ/ ಶ್ರೀಮತಿ ___________________

___________________

___________________

ಇವರಿಗೆ:

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,

ಧಾರವಾಡ ಪ್ರಾದೇಶಿಕ ವಿಭಾಗ, ಧಾರವಾಡ.

ಮಾನ್ಯರೇ,

2019–20 ನೇ ಸಾಲಿಗೆ ಇ–ಟೆಂಡರ್ ಅಧಿಸೂನೆ ಸಂಖ್ಯೆ: ಸಂಖ್ಯೆ:ಎ2/ಬಿಜಿಟಿ/Maintenance/Residence/ಸಿಆರ್–13/ 2019–20 ದಿನಾಂಕ: 30–05–2019 ರಲ್ಲಿ ಧಾರವಾಡ ಅರಣ್ಯ ವಿಭಾಗದ ವಿವಿದ ವಲಯಗಳ/ತಾಲೂಕುಗಳಲ್ಲಿ ವಿವಿಧ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇ ಟೆಂಡರ್ ತಾಂತ್ರಿಕ ಬಿಡ್ ಅರ್ಜಿ ನಮೂನೆ ಈ ಕೆಳಗಿನಂತೆ ಸಲ್ಲಿಸಿರುತ್ತೇನೆ.

| | | |
|---|---|---|
| 1. | Contractors registration Certificate issued by PWD for Class-I Only. | |
| 2. | PAN card of the Tenderer. | |
| 3. | GST Registration of the Tenderer . | |
| 4. | Balance Sheet of the last three financial years (Profit & Loss Sheet prepared by the Chartered Accountant) | |
| 5. | I.T. returns Certificate of last three financial years. | |
| 6. | Work done / satisfactory certificate issued by Forest Department / Other Government Department for Carried out UGD Construction/Civil Works of Tender Amount or Higher, in the last three financial years. (Priority will be given for the said works) | |
| 7. | PF Registration Certificate. | |
| 8. | Authorised Bank Account Details of Forest Contractors. | |
| 9 | Details of Labours working under Forest Contractors. | |
| 10. | Details of Machineries working under Forest Contractors. | |

ನಾನು/ನಾವು ಈ ಮೂಲಕ ದೃಢಿಕರಿಸುವುದೇನೆಂದರೆ ಮೇಲೆ ನೀಡಿದ ಮಾಹಿತಿಗಳು ವಾಸ್ತವ ಮತ್ತು ಸತ್ಯ, ಮತ್ತು ನಾನು/ನಾವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ಪ್ರಾದೇಶಿಕ ವಿಭಾಗ, ಧಾರವಾಡ ಸಂಖ್ಯೆ:ಎ2/ಬಿಜಿಟಿ/Maintenance/Residence/ಸಿಆರ್–13/2019–20 ದಿನಾಂಕ: 30–05–2019 ರ ಪ್ರಕಟಣೆಯನ್ನು ಓದಿದ್ದೇನೆ/ವೆ ಮತ್ತು ವಿವಿಧ ಬದ್ಧತೆ ಮತ್ತು ಷರತ್ತುಗಳನ್ನು ತಿಳಿದುಕೊಂಡಿದ್ದೇನೆ/ವೆ.

ಸ್ಥಳ:

ದಿನಾಂಕ: ಅಧಿಕೃತ ವ್ಯಕ್ತಿಯ ಸಹಿ ಮತ್ತು ಮೊಹರು.

(ಈ ನಮೂನೆಯನ್ನು ಭರ್ತಿ ಮಾಡಿ ಅಧಿಕೃತ ವ್ಯಕ್ತಿಯ ಸಹಿ ಮತ್ತು ಮೊಹರು ಹಾಕಿ ಸ್ಕ್ಯಾನ ಮಾಡಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರ್ಮನಲ್ಲಿ ಅಪ್ ಲೊಡ್ ಮಾಡಬೇಕು)